# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 669 (690)
ಮಾನ್ಯ ಸದಸ್ಯರ ಹೆಸರು : ಶ್ರೀ ಸಿ. ಟಿ. ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21.08.2026
ಉತ್ತರಿಸುವ ಸಚಿವರು : ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿವೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 15 ಸರ್ಕಾರಿ ಜಿಲ್ಲಾ ಆಸ್ಪತ್ರೆಗಳು (ಬೆಂಗಳೂರಿನ 3 ಪ್ರಮುಖ ಆಸ್ಪತ್ರೆಗಳು ಸೇರಿ),**147** ತಾಲ್ಲೂಕು ಆಸ್ಪತ್ರೆಗಳು, **204** ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು 2160 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ- 0 1** ರಲ್ಲಿ ನೀಡಲಾಗಿದೆ. |
| ಆ) | ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಎಕ್ಸರೇ, ಸಿಟಿ-ಎಂ.ಆರ್.ಐ ಸೇರಿದಂತೆ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆಯೇ; ಎಷ್ಟು ಆಸ್ಪತ್ರೆಗಳಲ್ಲಿ ಅಳವಡಿಸಲು ಬಾಕಿ ಇದೆ; (ಜಿಲ್ಲಾವಾರು ವಿವರ ನೀಡುವುದು); | ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ) ಮಾದರಿಯಡಿಯಲ್ಲಿ 15 ಜಿಲ್ಲೆಗಳಲ್ಲಿ ಸಿ.ಟಿ ಸ್ಕ್ಯಾನಿಂಗ್ ಹಾಗೂ 06 ಜಿಲ್ಲೆಗಳಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆ. ವಿವರಗಳನ್ನು **ಅನುಬಂಧ-02** ರಲ್ಲಿ ನೀಡಲಾಗಿದೆ.<br><br>In House ಮಾದರಿಯಲ್ಲಿ 04 ಜಿಲ್ಲೆಗಳಲ್ಲಿ ಸಿ.ಟಿ ಸ್ಕ್ಯಾನಿಂಗ್ ಹಾಗೂ 06 ಜಿಲ್ಲೆಗಳಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸುವ ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ವಿವರವನ್ನು **ಅನುಬಂಧ-03** ರಲ್ಲಿ ನೀಡಲಾಗಿದೆ .<br><br>ಮುಂದುವರೆದು, ಸಿ.ಎಸ್.ಆರ್ ಹಾಗೂ ಇತರೆ ಅನುದಾನದಡಿಯಲ್ಲಿ 11 ಜಿಲ್ಲೆಗಳಲ್ಲಿ ಸಿ.ಟಿ ಸ್ಕ್ಯಾನಿಂಗ್ ಹಾಗೂ 01 ಜಿಲ್ಲೆಯಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆ.<br><br>ವಿವರವನ್ನು **ಅನುಬಂಧ-04** ರಲ್ಲಿ ನೀಡಲಾಗಿದೆ . |
| ಇ) | ರಾಜ್ಯದ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸದಿರುವುದು ಮತ್ತು ಉಪಕರಣಗಳನ್ನು ಅಳವಡಿಸಿರುವ ಕಡೆ ಅಗತ್ಯ ರೇಡಿಯಾಲಜಿಸ್ಟ್ ಹುದ್ದೆಗಳು ಖಾಲಿ ಇರುವುದರಿಂದ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ ತಾಲ್ಲೂಕು ಮತ್ತು ಜಿಲ್ಲಾ ಹಂತದ ಆಸ್ಪತ್ರೆಗಳಿಗೆ ಸ್ಕ್ಯಾನಿಂಗ್ ಉಪಕರಣಗಳನ್ನು ಒದಗಿಸಲಾಗಿದ್ದು, ರೇಡಿಯಾಲಜಿಸ್ಟ್‌ಗಳು ಲಭ್ಯವಿರುತ್ತಾರೆ.<br><br>ರೇಡಿಯಾಲಜಿಸ್ಟ್‌ಗಳು ಲಭ್ಯವಿಲ್ಲದೇ ಇರುವ ಕಡೆ ಸ್ಥಳೀಯವಾಗಿ ಲಭ್ಯವಿರುವ ಖಾಸಗಿ ರೇಡಿಯಾಲಜಿಸ್ಟ್‌ಗಳೊಂದಿಗೆ MOU ಮಾಡಿಕೊಂಡು ಸ್ಕ್ಯಾನಿಂಗ್ ಸೇವೆಗಳನ್ನು ನೀಡಲಾಗುತ್ತಿದ್ದು, ರೋಗಿಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. |
| ಈ) | ರಾಜ್ಯದಲ್ಲಿಡೆ ಎಷ್ಟು ರೇಡಿಯಾಲಜಿಸ್ಟ್ ಹುದ್ದೆಗಳು ಖಾಲಿ ಇವೆ: ಖಾಲಿ ಹುದ್ದೆಗಳನ್ನು ಭರ್ತಿಮಾಡದೇ ಇರುವುದಕ್ಕೆ ಕಾರಣಗಳೇನು; ಯಾವ ಕಾಲಮಿತಿಯೊಳಗೆ ಹುದ್ದೆಗಳನ್ನು ಭರ್ತಿಮಾಡಲಾಗುವುದು; | ಪ್ರಸುತ ರಾಜ್ಯದಲ್ಲಿ 80 ರೇಡಿಯಾಲಜಿಸ್ಟ್ ಹುದ್ದೆಗಳು ಖಾಲಿ ಇರುತ್ತದೆ. ಖಾಲಿ ಇರುವ ರೇಡಿಯಾಲಜಿಸ್ಟ್ ಹುದ್ದೆಗಳನ್ನು ಈ ಕೆಳಕಂಡಂತೆ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ:-<br><br>1. ಪತ್ರ ಸಂಖ್ಯೆ: ಆಕುಕ 453 ಹೆಚ್ಎಸ್‌ಹೆಚ್ 2022, ದಿನಾಂಕ:13.12.2022 ರಲ್ಲಿ ರಾಜ್ಯದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ತಜ್ಞವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಆದೇಶಗಳಡಿ ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ |

| | | |
|---|---|---|
| | | ಹಂತದಲ್ಲಿ ನಿಯಾಮಾನುಸಾರ ಭರ್ತಿಮಾಡಲು ಅನುಮತಿ ನೀಡಲಾಗಿದೆ.<br>2. ಆದೇಶ ಸಂಖ್ಯೆ ಆಕುಕ 619 ಹೆಚ್ಎಸ್ಹೆಚ್ 2022, ದಿ:17.01.2024 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞವೈದ್ಯರನ್ನು ಮತ್ತು ಸಾ.ಕ. ವೈದ್ಯಾಧಿಕಾರಿಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿಮಾಡಲು ಅನುಮತಿ ನೀಡಲಾಗಿದೆ.<br>3. ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.<br>4. ಸರ್ಕಾರದ ಸೀಟಿನಡಿಯಲ್ಲಿ ವ್ಯಾಸಂಗ ಪೂರೈಸಿದ ವೈದ್ಯರು/ತಜ್ಞ ವೈದ್ಯರುಗಳನ್ನು 1 ವರ್ಷದ ಕಡ್ಡಾಯ ಸರ್ಕಾರಿ ಸೇವೆಯಲ್ಲಿ ನೇಮಕ ಮಾಡುವ ಮೂಲಕ ವೈದ್ಯರ/ತಜ್ಞರುಗಳ ಕೊರತೆಯನ್ನು ನೀಗಿಸಲು ಕ್ರಮಕೈಗೊಳ್ಳಲಾಗುತ್ತಿದೆ |
| ಉ) | ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಯಂತ್ರಗಳನ್ನು ಅಳವಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ; ಇದಕ್ಕೆ ಅಗತ್ಯವಿರುವ ಹಣ ಎಷ್ಟು; ಅಗತ್ಯ ಹಣ ಮೀಸಲಿಡಲಾಗಿದೆಯೇ? | 2025-2026 ನೇ ಸಾಲಿನಲ್ಲಿ 98 ಸ್ಕ್ಯಾನಿಂಗ್ ಯಂತ್ರಗಳನ್ನು ಖರೀದಿಸಲು ರೂ 17.64 ಕೋಟಿ ಅನುದಾನ ಮೀಸಲಿಡಲಾಗಿದ್ದು, ಸ್ಕ್ಯಾನಿಂಗ್ ಯಂತ್ರಗಳ ಖರೀದಿ ಪ್ರಕ್ರಿಯೆಯು KSMSCL ಇಂದ ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ:ಆಕುಕ 92 ಎಸ್‌ಟಿಕ್ಯೂ 2026**

([illegible] ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತುವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ಜಿಲ್ಲಾವಾರು ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು ಆಸ್ಪತ್ರೆ | ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ |
|---|---|---|---|---|
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 3 | 5 | 36 |
| 2 | ಬೆಂಗಳೂರು ಗ್ರಾಂ | 4 | 2 | 48 |
| 3 | ರಾಮನಗರ | 3 | 4 | 62 |
| 4 | ಚಿತ್ರದುರ್ಗ | 5 | 11 | 80 |
| 5 | ದಾವಣಗೆರೆ | 4 | 4 | 80 |
| 6 | ಕೋಲಾರ | 5 | 2 | 63 |
| 7 | ಚಿಕ್ಕಬಳ್ಳಾಪುರ | 5 | 2 | 57 |
| 8 | ಶಿವಮೊಗ್ಗ | 6 | 7 | 93 |
| 9 | ತುಮಕೂರು | 9 | 4 | 144 |
| 10 | ಬಾಗಲಕೋಟೆ | 5 | 8 | 49 |
| 11 | ಬೆಳಗಾವಿ | 9 | 16 | 137 |
| 12 | ವಿಜಯಪುರ | 4 | 9 | 63 |
| 13 | ಧಾರವಾಡ | 3 | 0 | 33 |
| 14 | ಗದಗ | 4 | 2 | 39 |
| 15 | ಹಾವೇರಿ | 6 | 5 | 69 |
| 16 | ಉ.ಕನ್ನಡ | 10 | 3 | 83 |

| ಕ್ರ. ಸಂ | ಜಿಲ್ಲೆ | ತಾಲ್ಲೂಕು ಆಸ್ಪತ್ರೆ | ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ |
|---|---|---|---|---|
| 17 | ಬಳ್ಳಾರಿ | 2 | 6 | 30 |
| 18 | ವಿಜಯನಗರ | 5 | 7 | 49 |
| 19 | ಬೀದರ್ | 4 | 8 | 53 |
| 20 | ಕಲಬುರಗಿ | 6 | 16 | 84 |
| 21 | ಯಾದಗಿರಿ | 2 | 6 | 41 |
| 22 | ಕೊಪ್ಪಳ | 3 | 9 | 46 |
| 23 | ರಾಯಚೂರು | 4 | 6 | 50 |
| 24 | ಚಾಮರಾಜನಗರ | 3 | 3 | 60 |
| 25 | ಚಿಕ್ಕಮಗಳೂರು | 6 | 5 | 90 |
| 26 | ದಕ್ಷಿಣ ಕನ್ನಡ | 4 | 7 | 66 |
| 27 | ಹಾಸನ | 7 | 15 | 134 |
| 28 | ಕೊಡಗು | 2 | 7 | 29 |
| 29 | ಮಂಡ್ಯ | 6 | 10 | 113 |
| 30 | ಮೈಸೂರು | 6 | 9 | 118 |
| 31 | ಉಡುಪಿ | 2 | 6 | 61 |
| | ರಾಜ್ಯದ ಒಟ್ಟು | 147 | 204 | 2160 |

ಸರ್ಕಾರದ ಆದೇಶ ಸಂಖ್ಯೆ: ಆಕುಕ ೨೮ ಸಿಜಿಎಂ ೨೦೦೭ ದಿನಾಂಕ: ೬-೦೭-೨೦೦೭ ರಲ್ಲಿ ಧರ್ಮಸ್ಥಳ ಪ್ರಾ.ಆ.ಕೇಂದ್ರವನ್ನು ಸ.ಆ.ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಪ್ರಸ್ತುತ ಪ್ರಾ.ಆ.ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

## ಅನುಬಂಧ-1

## District hospitals which are under HFW

| Sl No. | District Name | Name of District hospitals |
|---|---|---|
| 1 | Major Hospitals in Bengaluru Urban District | KC General Hospital |
| | | Jayanagar Genral Hospital |
| | | Sir CV Raman Hospital |
| 2 | Tumkur | District Hospital |
| 3 | Kolar | SNR District Hospital |
| 4 | Davanagere | Chigateri District Hospital |
| 5 | Mysore | District Hospital |
| 6 | Dakshina Kannada | Wenlock District Hospital |
| 7 | Udupi | District Hospital |
| 8 | Vijayapura | District Hospital |
| 9 | Dharwad | District Hospital |
| 10 | Ballari | District Hospital |
| 11 | Ramanagara | District Hospital |
| 12 | Bagalkote | District Hospital |
| 13 | Vijayanagara | District Hospital Hospete |

## ಅನುಬಂಧ-02

ಪಿ.ಪಿ.ಪಿ ಮಾದರಿಯಲ್ಲಿ ಸೇವೆ ಒದಗಿಸುತ್ತಿರುವ ಸಿ.ಟಿ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರಗಳು

| SL No. | District | Taluka |
|---|---|---|
| 1 | Bangalore Urban | Jayanagar General Hospital |
| 2 | Gadag | District Hospital, Gadag |
| 3 | Bagalkote | District Hopsital, Bagalkote |
| 4 | Bijapura | District Hospital, Bijapura |
| 5 | Chamarajanagara | Medical College, Chamarajanagara |
| 6 | Chikkamagaluru | District Hopsital, Chikkamagaluru |
| 7 | Davanagaere | District Hopsital, Davanagere |
| 8 | Dharwad | Dharwad Civil / District Hospital |
| 9 | Haveri | District Hopsital, Haveri |
| 10 | Kodagu | Kodagu Medical College |
| 11 | Kolar | SNR, District Hospital |
| 12 | Tumkuru | District Hospital |
| 13 | Udupi | District Hospital, Udupi |
| 14 | Uttara Kannada | Medical College, Karwar |
| 15 | Yadgiri | Medical College, Yadigiri |
| | | Total |

ಪಿ.ಪಿ.ಪಿ ಮಾದರಿಯಲ್ಲಿ ಸೇವೆ ಒದಗಿಸುತ್ತಿರುವ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರಗಳು

| SL No. | District | Taluka |
|---|---|---|
| 1 | Bijapura | District Hospital, Bijapura |
| 2 | Kolar | SNR, District Hospital |
| 3 | Tumkuru | District Hospital |
| 4 | Udupi | District Hospital, Udupi |
| 5 | Chitradurga | District Hospital, Chitradurga |
| 6 | Gadag | District Hospital, Gadag |
| | | Total |

ಉಪ ನಿರ್ದೇಶಕರು (ಎನ್.ಎಫ್.ಡಿ.ಎಸ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

## ಅನುಬಂಧ-03

In House ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಸಿ.ಟಿ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರಗಳು

| SL No. | District | Taluka |
|---|---|---|
| 1 | Bangalore Rural | Doddaballpura General Hospital |
| 2 | Bangalore Urban | Sir C V Raman Hospital |
| 3 | Hassan | Aarsikere Sub Division Hospital |
| 4 | Mysore | District Hospital |

In House ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರಗಳು

| SL No. | District | Taluka |
|---|---|---|
| 1 | Bagalkote | District Hopsital, Bagalkote |
| 2 | Bangalore Urban | KC General Hospital |
| 3 | Davanagaere | District Hospital, Davanagere |
| 4 | Dharwad | Dharwad Civil / District Hospital |
| 5 | Mysore | District Hospital |
| 6 | Ramanagara | District Hospital, Ramanagara |

ಉಪ ನಿರ್ದೇಶಕರು (ಹೆಚ್.ಎಫ್.ಡಿ.ಎಸ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಅನುಬಂಧ-04

ಸಿ.ಎಸ್.ಆರ್ ಹಾಗೂ ಇತರೆ ಅನುದಾನದಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಸಿ.ಟಿ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರಗಳು

| SL No. | District | Taluka |
|---|---|---|
| 1 | Bangalore Urban | KC General Hospital |
| 2 | Bellary | District Hospital, Bellary |
| 3 | Dakshina Kannada | Wenlock District Hospital, Mangaluru |
| 4 | Hassan | Taluka Hospital Holenarasipura |
| 5 | Koppal | Taluka Hospital, Yalburga |
| 6 | Koppal | Taluka Hospital Kustagi |
| 7 | Koppal | Taluka Hospital Gangavathi |
| 8 | Raichur | General Hospital Lingasugur |
| 9 | Ramanagara | District Hospital, Ramanagara |
| 10 | Shivamogga | Mcgann Hospital, Shivamogga |
| 11 | Vijayanagar | District Hospital |

ಸಿ.ಎಸ್.ಆರ್ ಹಾಗೂ ಇತರೆ ಅನುದಾನದಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಎಂ.ಆರ್.ಐ ಸ್ಕ್ಯಾನಿಂಗ್ ಉಪಕರಣಗಳ ಜಿಲ್ಲಾವಾರು ವಿವರ

| SL No. | District | Taluka |
|---|---|---|
| 1 | Bellary | District Hospital, Bellary |

ಉಪ ನಿರ್ದೇಶಕರು (ಎನ್.ಎಫ್.ಡಿ.ಎಸ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು